ಕಣ್ಣು ಅರಳದ ಕೂಸು ಮ್ಯಾಲೆ ಕತ್ತಲೆ ಗವಿಯ
ಆಗಲ್ಲ ಕಂಡೆ ನಾನೀಗ । ಏಳಮ್ಮಾ ।
ಮಲಗಿರುವ ತಾಯಿ ಪೃಥಿವೀ ।

ಮೊಲೆಹಾಲ ಧಾರೀಗಿ ಎಲ್ಲೀದೊ ಸೆಲೆಯಂದೆ ।
ಆಗೆಲ್ಲಿ ತಾಯಿ ಈ ನೆಲಿಯೆ । ಏಳಮ್ಮಾ ।
ಮಲಗಿರುವ ತಾಯಿ ಪೃಥಿವೀ ।

ಏನಂತೊ ಅಂದಿದ್ದ ತಾಯಂತ ಈಗಂದ
ಕಂಣೇಲಿ ಕಂಡು ಮನಗಂಡು । ಏಳಮ್ಮಾ ।
ಮಲಗಿರುವ ತಾಯಿ ಪೃಥಿವೀ ।

ಉಂಡದ್ದು ಹೌದಮ್ಮಾ ಕಂಡದ್ದು ನಿಜವಮ್ಮಾ ।
ಉಂಡೇನು? ಈಗ ಕಂಡೇನು? । ಏಳಮ್ಮಾ ।
ಮಲಗಿರುವ ತಾಯಿ ಪೃಥಿವೀ ।

ಕತ್ತಲೆಯ ಸೋಂಕು ಹೂಬಿಸಿಲ ಮಂಕು ।
ಕಪ್ಪೇನು ಮತ್ತ ಬಿಳುಪೇನು । ಏಳಮ್ಮಾ
ಮಲಗಿರುವ ತಾಯಿ ಪೃಥಿವೀ ।

ಕಾಣದ ಕುರುಡು ಕಾಣೂವ ಈ ಕುರುಡು
ಕಂಡೇನು ಕಾಣದಿದ್ದೇನು । ಏಳಮ್ಮಾ ।
ಮಲಗಿರುವ ತಾಯಿ ಪೃಥಿವೀ ।

ಅರುವಲ್ಲ ಮರವಲ್ಲ ಅರಿತದ್ದು ಸ್ಥಿರವಿಲ್ಲ
ಅರಿತೇನು ಆಶೆ ತೀರದೆ । ಏಳಮ್ಮಾ ।
ಮಲಗಿರುವ ತಾಯಿ ಪೃಥಿವೀ ।

ಇಲ್ಲಂಬು ಮರುಗಲ್ಲ । ಅಲ್ಲಂಬು ಅಳುಕಲ್ಲ ।
ಇದ್ದಿಲ್ಲದಂಥ ಪರಿ ಹೊಲ್ಲ । ಏಳಮ್ಮಾ ।
ಮಲಗಿರುವ ತಾಯಿ ಪೃಥಿವೀ ।

ಕಿಂಭೂತ ಕೊರಡೊಂದು ತುಂಬೀತು ಕೊನರಾಗಿ
ಹೂವಾಗಿ ಹಂಣು ಬಿಡಲಿಲ್ಲ । ಏಳಮ್ಮಾ ।
ಮಲಗಿರುವ ತಾಯಿ ಪೃಥಿವೀ ।

ಎಲ್ಲೀಯ ನಿದ್ದಿ ಕಾಳನ ಕರಿ ನಿದ್ದಿ
ಇದ್ದೇನು ಇಲ್ಲದಿದ್ದೇನು । ಏಳಮ್ಮಾ ।
ಮಲಗಿರುವ ತಾಯಿ ಪೃಥಿವೀ ।

ತಟ್ಟಿದರು ಮಿಸುಕಿಲ್ಲ ಹಲುಬಿದರು ಉಲುವಿಲ್ಲ ।
ತುಟಿಯಲ್ಲಿ ತಟಕ ಅಲುಗಿಲ್ಲ । ಏಳಮ್ಮಾ ।
ಮಲಗಿರುವ ತಾಯಿ ಪೃಥಿವೀ ।

ಮರೆತು ಮಲಗುವಳಲ್ಲ ಅರಿತು ಆತುರಳಲ್ಲ ।
ನಿನಗಾಟ ನನಗ ಎದಿಗಿಚ್ಚ । ಏಳಮ್ಮಾ ।
ಮಲಗಿರುವ ತಾಯಿ ಪೃಥಿವೀ ।

ಅಂದು ಆಗಿಸಬಲ್ಲಿ ನೆನೆದು ನಾಟಿಸಬಲ್ಲಿ ।
ಮಾರೀಯ ಮುಸುಕು ತೆರೆದೇಳ । ಏಳಮ್ಮಾ ।
ಮಲಗಿರುವ ತಾಯಿ ಪೃಥಿವೀ ।

ಹಾಲು ನಿದ್ದೀ ತೊರೆಯೇ ಜೇನು ನಿದ್ದೀ
ತೊರೆಯೆ ।
ಸಕ್ಕರಿಯ ನಿದ್ದಿ ತೊರೆದೇಳು । ಏಳಮ್ಮಾ ।
ಮಲಗಿರುವ ತಾಯಿ ಪೃಥಿವೀ ।

ಕನಸಿನ ಕನ್ನಕ್ಕಿ ಮನಸಿನ ಮಾಯಮ್ಮಾ ।
ಎಚ್ಚತ್ತು ತಾಯಿ ಎಂವೆ ಬಿಚ್ಚ । ಏಳಮ್ಮಾ ।
ಮಲಗಿರುವ ತಾಯಿ ಪೃಥಿವೀ ।

ಏಳಮ್ಮ ಏಳಮ್ಮಾ ಏಳೆನ್ನ ತಾಯಮ್ಮಾ
ಏಳದೆ ಜೀವ ಕೇಳದ । ಏಳಮ್ಮಾ
ಮಲಗಿರುವ ತಾಯಿ ಪೃಥಿವೀ ।

ಈ ಗಾಳಿ ನಿನ್ನುಸಿರ ಈ ಬೆಂಕಿ ಮೈಗಾವ ।
ಮುದುಡೀದ ಮೊಗ್ಗೀ ಅರಳೀಸ । ಏಳಮ್ಮಾ ।
ಮಲಗಿರುವ ತಾಯಿ ಪೃಥಿವೀ ।

ಮೊಲೆಹಾಲು ಸಾಕಮ್ಮಾ । ಸವಿಲಾಲಿ ಬೇಕಮ್ಮಾ ।
ಮುದ್ದಾಡಿ ರಮಿಸಿ ಮೈದಡವ । ಏಳಮ್ಮಾ ।
ಮಲಗಿರುವ ತಾಯಿ ಪೃಥಿವೀ ।

('ನನ್ನ ನಲ್ಲ' ಸಂಕಲನ, 1933)